## ನಮ್ಮ ಹಕ್ಕುಗಳನ್ನು ಕಾಯುತ್ತಿರುವ ದೇವತೆ

**-ರಂಜನಿ ರಾಘವನ್,** ಸಿನಿಮಾ ನಟಿ–ಕಥೆಗಾರ್ತಿ

ಸಂವಿಧಾನ ಎಷ್ಟೋ ಜನಕ್ಕೆ ಇನ್ನೂ ಪುಸ್ತಕ ರೂಪದಲ್ಲೇ ಉಳಿದಿದೆ. ಸಂವಿಧಾನದ ಬಗ್ಗೆ ಮಾತಾಡೋರು ಮಾತಾಡುತ್ತಿರುತ್ತಾರೆ, ಬುದ್ಧಿಜೀವಿಗಳು ಅದರ ಬಗ್ಗೆ ಚರ್ಚೆ ಮಾಡುತ್ತಿರುತ್ತಾರೆ. ಆದರೆ ಅದರ ಬಗ್ಗೆ ಎಷ್ಟೋ ಜನಕ್ಕೆ ಗೊತ್ತಿಲ್ಲ. ಭಾರತದಂಥ ದೇಶದಲ್ಲಿ ತುಂಬಾ ಜನರಿಗೆ ಓದು ಬರಹ ಗೊತ್ತಿಲ್ಲ. ಗೊತ್ತಿದ್ದರೂ ಬರೀ ಅಕ್ಷರಸ್ಥರಾಗಿದ್ದಾರೆ, ಜ್ಞಾನವಂತರಾಗಿಲ್ಲ. ಸಂವಿಧಾನದ ಬಗ್ಗೆ ಗೊತ್ತಿದ್ದರೂ ಅದರ ಅಳವಡಿಕೆ ಗೊತ್ತಿರುವುದಿಲ್ಲ. ಎಲ್ಲಾ ಮೌಲ್ಯಗಳು, ನೈತಿಕತೆಗಳು, ಸರಿ ತಪ್ಪುಗಳು, ಕಾನೂನುಗಳು ಗೊತ್ತಿದ್ದರೂ ಅದರ ಅಳವಡಿಕೆಯಲ್ಲಿ ಎಡವುತ್ತಾರೆ.




ಸಂವಿಧಾನ ಖಂಡಿತವಾಗಿಯೂ ನನ್ನ ಬದುಕಿಗೆ ಸಾಕಷ್ಟನ್ನು ಕೊಟ್ಟಿದೆ. ನಾನು ಬೆಂಗಳೂರಿನಂಥ ಊರಿನಲ್ಲಿ ಹುಟ್ಟಿ, ಒಂದೊಳ್ಳೆಯ ಮನೆಯಲ್ಲಿ ಬೆಳೆಯುತ್ತಾ, ಶಿಕ್ಷಣ, ಪ್ರತಿ ಸೌಲಭ್ಯವನ್ನು ಪಡೆದಿದ್ದೇನೆ. ಇದೆಲ್ಲಕ್ಕೂ ಸಂವಿಧಾನವೇ ಕಾರಣ. ಇದೆಲ್ಲಕ್ಕಿಂತ ಹೆಚ್ಚಾಗಿ ಇಂದು ಸಮಾನತೆ ಬಗ್ಗೆ ಮಾತಾಡಲು ಸಂವಿಧಾನ ಧೈರ್ಯ ಕೊಟ್ಟಿದೆ. ಶಾಲೆಯಲ್ಲಿ ನನ್ನೊಂದಿಗೆ ಓದಿದ ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳ ಕರಿಯರ್ ಹೋಲಿಸಿದರೆ, ಬಹಳ ವ್ಯತ್ಯಾಸ ಕಾಣುತ್ತದೆ. ಅವರಿಗೆ ಅವರದೇ ಆದಂಥ ಆಯ್ಕೆಗಳಿಗೆ ಅವಕಾಶ ಸಿಗಲಿಲ್ಲ ಎನ್ನುವುದು ನನ್ನ ಕಣ್ಣೆದುರಿಗೇ ಕಾಣುತ್ತಿದೆ. ಈ ಥರದ ಆಯ್ಕೆಗಳಿಂದ ನಾನು ವಂಚಿತಳಾಗಬಾರದು ಎಂದು ನನ್ನದೇ ಆದ ಹೋರಾಟದಲ್ಲಿ ನಾನಿದ್ದೇನೆ. ಇದಕ್ಕೆ ನನಗೆ ವಿಶ್ವಾಸ ಕೊಟ್ಟಿರುವುದು, ಆತ್ಮಬಲ ಕೊಟ್ಟಿರುವುದೇ ಸಂವಿಧಾನ.

ಶಿಕ್ಷಣ ಪಡೆಯಲು, ದುಡಿಯಲು, ಅನ್ನಿಸಿದ್ದನ್ನು ಹೇಳಲು ಇಂದು ನಾವು ಎರಡನೇ ಸಲ ಯೋಚಿಸಬೇಕಿಲ್ಲ. ಏಕೆಂದರೆ ಕಾನೂನೇ ಅದಕ್ಕೆ ಬೆಂಬಲ–ಬಲ ನೀಡಿದೆ. ಕಾನೂನು ಎಂದರೆ ಬೇರೇನೂ ಅಲ್ಲ, ಸಂವಿಧಾನ. ನಾವು ಕೆಲಸ ಮಾಡುವ ಜಾಗದಲ್ಲಿ ಸಮಾನತೆ, ಸಂಭಾವನೆಯಲ್ಲಿ ಸಮಾನತೆ, ಅಭಿವ್ಯಕ್ತಿ, ವಾಕ್ ಸ್ವಾತಂತ್ರ್ಯ ಇವೆಲ್ಲಕ್ಕೂ ಸಂವಿಧಾನವೇ ಕಾರಣ. ಈಗ ಜಗತ್ತಿನ ಅತ್ಯಂತ ಪ್ರಬಲ ವ್ಯಕ್ತಿಯ ವಿರುದ್ಧ ಮಾತಾಡಲು ಸಾಧ್ಯವಾಗಿರುವುದೂ ವ್ಯಕ್ತಿ ಸ್ವಾತಂತ್ರ್ಯವನ್ನು ಸಂವಿಧಾನ ಕೊಟ್ಟಿರುವುದಕ್ಕೆ. ಸಂವಿಧಾನ 'ಕಾಣದ ಕೈ' ಅಥವಾ ನಮ್ಮನ್ನು ಪೊರೆಯುತ್ತಿರುವ, ನಮ್ಮ ಹಕ್ಕುಗಳನ್ನು ಕಾಯುತ್ತಿರುವ ದೇವತೆ ಎಂದೇ ನಾನು ಭಾವಿಸುತ್ತೇನೆ.





ಇರುವ ನೇರ ಸಂಬಂಧವನ್ನು ಸೂಚಿಸುವಂತಿದೆ.

### ಸ್ವಾಭಿಮಾನ - ಆತ್ಮಘನತೆಯ ಸಂಕೇತ

ಸಂವಿಧಾನದ ಬಹು ದೊಡ್ಡ ಶಕ್ತಿ, ಸಮಾಜದ ಎಲ್ಲ ವರ್ಗಗಳ ನಾಗರಿಕರಿಗೆ ಅದು ನೀಡುವ ಆತ್ಮವಿಶ್ವಾಸ ಹಾಗೂ ಆತ್ಮಘನತೆಯಲ್ಲಿದೆ. ಜಗತ್ತಿನ ಬೇರಾವ ಶಕ್ತಿ, ಸಂಕೇತವೂ ಈ ಬಗೆಯ ಆತ್ಮವಿಶ್ವಾಸ ಅಥವಾ ಆತ್ಮಘನತೆಯನ್ನು ಮನುಷ್ಯನಿಗೆ ನೀಡುವುದಿಲ್ಲ ಎನ್ನುವುದು ಸಂವಿಧಾನದ ಮಹತ್ವವನ್ನು ಹೇಳುವಂತಿದೆ.

ದೇವರು ಹಾಗೂ ಧರ್ಮ ಸಾಮಾಜಿಕ ಸಂರಚನೆಯ ಕೇಂದ್ರದಲ್ಲಿರುವ ಸಂಗತಿಗಳು. ಒಂದಲ್ಲಾ ಒಂದು ಬಗೆಯಲ್ಲಿ ದೇವರು ಹಾಗೂ ಧರ್ಮವನ್ನು ಒಳಗೊಳ್ಳದ ಯಾವ ನಾಗರಿಕತೆಯೂ ಇಲ್ಲ, ಯಾವ ದೇಶ–ಕಾಲವೂ ಇಲ್ಲ. ಮನುಷ್ಯನನ್ನು ಸರಿ ದಾರಿಯಲ್ಲಿ ನಡೆಸುವುದರಲ್ಲಿ ದೇವರು–ಧರ್ಮದ ಅಸ್ತಿತ್ವವಿದೆ. ಆದರೆ, ದೇವರು ಮತ್ತು ಧರ್ಮ ಸೃಷ್ಟಿಸಿರುವ ಸಂಕೇತಗಳು ಜನರ ಶರಣಾಗತಿಯನ್ನು ಬಯಸುತ್ತವೆ. ಭಕ್ತಿ, ಪಾಪಪ್ರಜ್ಞೆಯ ಮೂಲಕ ಸಮುದಾಯವನ್ನು ನಿಯಂತ್ರಿಸಲು ಪ್ರಯತ್ನಿಸುತ್ತವೆ. ಆದರೆ, ಸಂವಿಧಾನ – ವ್ಯಕ್ತಿಯಲ್ಲಿ ಹಾಗೂ ಸಮುದಾಯದಲ್ಲಿ ಆತ್ಮಾಭಿಮಾನವನ್ನು ರೂಪಿಸುತ್ತದೆ. ಸಂವಿಧಾನ ಕೊಟ್ಟಿರುವ ಸಂಕೇತಗಳು

## ಎಲ್ಲರ ನೈಜ ಧರ್ಮಗ್ರಂಥ

**-ಶಿವಕುಮಾರ ಮಾವಲಿ,**
ಉಪನ್ಯಾಸಕ–ಲೇಖಕ




ಸಂವಿಧಾನ ಎನ್ನುವುದು ಪ್ರತಿ ಜೀವಿಗೂ ಮನೆಯ ಒಳಗೂ ಹೊರಗೂ ರಕ್ಷಣೆ ನೀಡುವ ಜೀವಂತ ಗ್ರಂಥ. ಇದು ಸಮಾಜದ ಎಚ್ಚರಕ್ಕಾಗಿ ಜಾಗೃತಿಗಾಗಿ ತುಡಿಯುತ್ತದೆ. ಸಂವಿಧಾನ ನೀಡಿರುವ ಶೈಕ್ಷಣಿಕ ಹಕ್ಕು ನನ್ನ ಜೀವನದಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸಿದೆ. ಶಕ್ತಿಯುತವಾದ ಶಿಕ್ಷಣದ ಹಕ್ಕನ್ನು ಉಚಿತ ಮತ್ತು ಕಡ್ಡಾಯವಾಗಿ ಪಡೆದಿದ್ದರ ಪರಿಣಾಮ, ನೆಮ್ಮದಿಯ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. ಉಪನ್ಯಾಸಕನಾಗಿ, ಬರಹಗಾರನಾಗಿ ಸಂವಿಧಾನ ಸದಾ ನನ್ನ ನೆರವಿಗೆ ಅದು ನೀಡಿದ 'ವಾಕ್ ಸ್ವಾತಂತ್ರ್ಯ'ದ ಮೂಲಕ ನಿಲ್ಲುತ್ತದೆ. ಯಾವುದೇ ಆತಂಕವಿಲ್ಲದೆ, ನನ್ನ ಅಭಿಪ್ರಾಯವನ್ನು ಮಂಡಿಸಲು, ವಿದ್ಯಾರ್ಥಿಗಳ ಜೊತೆ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಚರ್ಚಿಸಲು ಇದರಿಂದ ಸಾಧ್ಯವಾಗಿದೆ.

ಒಬ್ಬ ಬರಹಗಾರನಾಗಿ ನಿಷ್ಠುರವಾಗಿ ನನ್ನ ಅಭಿಪ್ರಾಯ ವ್ಯಕ್ತಪಡಿಸಲು, ಸರ್ಕಾರವನ್ನು ಪ್ರಶ್ನಿಸಲು ಸಮಾಜವನ್ನು ಎಚ್ಚರಿಸುವ ಹಕ್ಕನ್ನು ನನ್ನ ಸಂವಿಧಾನ ದಯಪಾಲಿಸಿದೆ. ಒಬ್ಬ ನಾಗರಿಕನಾಗಿ, ವೃತ್ತಿಪರನಾಗಿ ಸಂವಿಧಾನಕ್ಕೆ ನಾನು ಸದಾ ಋಣಿಯಾಗಿರುತ್ತೇನೆ. ಧರ್ಮವೆಂಬುದು ನಮ್ಮ ಜೀವನ ಗತಿಯ ಮಾರ್ಗದರ್ಶಕ ಎನ್ನುವುದಾದರೆ, ಸಂವಿಧಾನ ಎಂಬುದು ಎಲ್ಲರ ನೈಜ ಧರ್ಮಗ್ರಂಥ ಎಂದರೆ ಅತಿಶಯೋಕ್ತಿಯಲ್ಲ.